

# ಅರಿವಿನ ಬೆಳಕಿನಲ್ಲಿ ಬುದ್ಧಮಾರ್ಗದ ಪಥಿಕರು

**ಕಿಸಾಗೋತಮಿ**

ನನ್ನ ಕಂದನ ಉಸಿರು ನಿಂತಿದೆ. ಏನಾಯಿತೋ ಗೊತ್ತಿಲ್ಲ. ಈಗ ತಾನೇ ಮೊಲೆಹಾಲು ಕುಡಿದು ಮಲಗಿದ ಕಂದ ಇದ್ದಕ್ಕಿದ್ದಂತೆ ಇನ್ನಿಲ್ಲವೆಂದರೆ ಏನರ್ಥ? ನನ್ನ ಮೊಲೆ ಹಾಲೇ ಹಾಲಾಹಲವಾಗಿತ್ತೇ? ಇರಲಾರದು. ನಾನು ಅಂಥ ವಿಷಕಾರೀ ಆಹಾರವನ್ನೇನೂ ತಿಂದಿರಲಿಲ್ಲ. ಸಾರಿಗೆ ಸೊಪ್ಪು ತರಲೆಂದು ಹಿತ್ತಲಿನ ಕಾಡಿಗೆ ಹೋಗಿದ್ದಾಗ ನನ್ನ ಮೊಲೆಗೇನಾದರೂ ಯಾವುದಾದರೂ ವಿಷಕಾರಿ ಮುಳ್ಳು ತಗುಲಿತ್ತೇ? ಇರಲಿಕ್ಕಿಲ್ಲ. ಇದ್ದಿದ್ದರೆ ಅದರ ನೋವು ಮೊದಲು ನನ್ನನ್ನು ಬಾಧಿಸಬೇಕಿತ್ತಲ್ಲ! ಕನಿಷ್ಠ ನನ್ನ ಕಂದ ಹಲ್ಲಿಲ್ಲದ ತನ್ನ ಒಸಡಿನಿಂದ ಕಚ್ಚಿ ಹಿಡಿದಾಗಲಾದರೂ ಆ ನೋವು ನನ್ನನ್ನು ಕಾಡಬೇಕಾಗಿತ್ತಲ್ಲ! ಇಲ್ಲ, ನನ್ನ ಕಂದ ಸಾಯುವಂಥ ಯಾವ ಅಪರಾಧವನ್ನೂ ನಾನು ಮಾಡಿರಲಿಲ್ಲ. ಆದರೂ ನನ್ನ ಕಂದ ಉಸಿರಾಡುತ್ತಿಲ್ಲ. ಅಥವಾ ಯಾರಾದರೂ ಕಣ್ತಪ್ಪಿಸಿ ಅವನ ಉಸಿರು ನಿಲ್ಲಿಸಿದರೇ? ಗೊತ್ತಿಲ್ಲ. ಈ ಹಸುಕಂದಗೆ ಅಂಥ ವೈರಿಗಳು ಯಾರಿದ್ದಾರೆ? ಯಾವ ದೇಶ ಆಳುತ್ತಾನೆಂದು ಹಾಗೆ ಮಾಡಲು ಸಾಧ್ಯ? ಇಲ್ಲ, ಇದು ದೇವರದೇ ಕೆಲಸ ಇರಬೇಕು. ನಾನು ನನ್ನ ಮಗುವನ್ನು ಎಷ್ಟರಮಟ್ಟಿಗೆ ಪ್ರೀತಿಸುತ್ತೇನೆಂದು ಪರೀಕ್ಷಿಸಲು ಹೀಗೆ ಮಾಡಿರಬಹುದು!

ಅಯ್ಯೋ... ನನ ಕಂದ... ಅದ್ಯಾವ ಕೆಟ್ಟದೃಷ್ಟಿ ನಿನ್ನನ್ನು ತಾಗಿತು? ಅಂಥ ದೃಷ್ಟಿ ತಾಗದಿರಲೆಂದೇ ಕೆನ್ನೆಗೆ ಹಚ್ಚಿದ ಕಾಡಿಗೆ ಕಪ್ಪು ಹಾಗೆಯೇ ಇದೆಯಲ್ಲ! ಆದಾಗ್ಯೂ ಅದನ್ನು ಮೀರಿ ನನ್ನ ಹಸುಕಂದನ ಉಸಿರನ್ನೇ ನಿಲ್ಲಿಸಿ ಬಿಡುವಂಥ ಕ್ರೂರ ಕಣ್ಣು ಯಾವುದು? ಅಯ್ಯೋ ವಿಧಿಯೇ! ನನ್ನ ಗಂಡ ಬಂದು ಕೇಳಿದರೆ ಏನೆಂದು ಹೇಳಲಿ? ಮಗು ನನ್ನ ಹೊಟ್ಟೆಯಲ್ಲಿ ಹುಟ್ಟಿದ್ದರೂ ನನಗಿಂತಲೂ ಅಧಿಕ ಹಕ್ಕು ಅವನಿಗೇ ಮಗನ ಮೇಲೆ. ಅದೆಷ್ಟು ಪ್ರೀತಿಯ ಮಳೆಗರೆಯುತ್ತಿದ್ದ. ಮೈಯನ್ನೆಲ್ಲಾ ಮುತ್ತಿನಿಂದ ಮೆತ್ತಿ ಬಿಡುತ್ತಿದ್ದನಲ್ಲಾ!

ನಾಟಿ ವೈದ್ಯ ಮಾಡುತ್ತಿದ್ದ ವೃದ್ಧನಲ್ಲಿಗೆ ಹೋದೆ. ನನ್ನ ಕಂದನನ್ನು ಉಳಿಸಿಕೊಡಿರೆಂದು ಅವರ ಪಾದದ ಮೇಲೆ ಮಲಗಿಸಿದೆ. ಇನ್ನೂ ವರುಷ ತುಂಬಿಲ್ಲ! ಆಗಲೇ ಉಸಿರು ನಿಂತಿದೆ! ಕಾರಣವೇನೆಂದು ತಿಳಿಯುತ್ತಿಲ್ಲ. ಈಗ ತಾನೇ ಘನವಾಗಿ ಹಾಲು ಕುಡಿದಿತ್ತು. ಕಟುವಾಯಿಯಲ್ಲಿ ನೋಡಿ ಅದರ ನೊರೆ ಹಾಗೆಯೇ ಇದೆ ಎಂದು ತೋರಿದೆ. ಅವರು ಅದನ್ನು ತೋರುಬೆರಳಲ್ಲಿ ಎತ್ತಿ ಹೆಬ್ಬೆಟ್ಟಿನಿಂದ ಸವರಿ, ಮೂಸಿ ನೋಡಿ, ನನ್ನ ಕಣ್ಣನ್ನೇ ತದೇಕಚಿತ್ತದಿಂದ ದಿಟ್ಟಿಸಿ ನೋಡಿ ಸುಮ್ಮನಾದರು. ಅದು ಏನಾದರೂ ವಿಷದ ನೊರೆಯೇ ಎಂದು ಅನುಮಾನಗೊಂಡು ಅವರು ಏನು ಹೇಳುವರೋ ಎಂದು ಗಾಬರಿ ಬಿದ್ದು ಕಾದೆ. ಕೈಕಾಲು ಎಲ್ಲ ಕಡೆ ಬಟ್ಟೆ ಸರಿಸಿ ನೋಡಿದರು – ಹಾವು ಗೀವು ಏನಾದರೂ ಕಚ್ಚಿದೆಯೇನೋ ಎಂದು. ಅವರಿಗೂ ಏನೂ ತಿಳಿಯಲಿಲ್ಲವೆಂದು ಕಾಣುತ್ತದೆ. ನನಗೆ ಏನೂ ಹೇಳಲಾಗದೆ ಮೌನವಾಗಿ ತಲೆತಗ್ಗಿಸಿದರು. ಹಾಲ ಅಮೃತದ ಶಿಲೆಯಿಂದ ಮಾಡಿದ್ದಂಥ ಮೂರ್ತಿಯಂತೆಯೇ ಇತ್ತು ಮೈ. ಈ ಸುಖಕ್ಕೋಸ್ಕರವೇ ನೀನಿಷ್ಟು ಸುಂದರವಾಗಿ ಹುಟ್ಟಿದೆಯಾ ಮಗು ಎಂದು ಆಲಾಪಿಸುತ್ತಿದ್ದೆ ನಾನು.

ಅಯ್ಯೋ, ತೊಟ್ಟಿಲಲ್ಲಿ ಮಲಗಿದ್ದಾಗ ಸ್ವರ್ಗಲೋಕದ ಕನಸು ಕಾಣುತ್ತಾ, ಹುಸಿನಗೆಯ ಮಂದಹಾಸವ ಬೀರುತ್ತ ನಗುತ್ತಿರಬೇಕಾದರೆ ಅವನಪ್ಪ ಶ್ರೀಮನ್ನಾರಾಯಣನೇ ನಮ್ಮ ಮನೆಯಲ್ಲಿ ಅವತರಿಸಿ